**ಕರ್ನಾಟಕ ಸರ್ಕಾರ**

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ:ಡಿಟಿಇ/62/ಇ.ಎಸ್.ಟಿ(6)/2016

ಆಯುಕ್ತರ ಕಛೇರಿ.
ಕಾಲೇಜು ಮತ್ತು ತಾಂತ್ರಿಕ ಇಲಾಖೆ.
ಅರಮನೆ ರಸ್ತೆ.ಬೆಂಗಳೂರು-560 001.
ದಿ:26.11.2020.

**ಸುತ್ತೋಲೆ**

**ವಿಷಯ:** ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ 2008ನೇ ಸಾಲಿನಿಂದ 2018 ನೇ ಸಾಲಿನವರೆಗೆ ವರ್ಷವಾರು ಗುತ್ತಿಗೆ ಅಥವಾ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಪತ್ರ ಸಂಖ್ಯೆ:ಇಡಿ/28/ಟಿಜಿಎಲ್/2018 ದಿ:30.09.2020.
2. ಈ ಕಛೇರಿಯ ಸುತ್ತೋಲೆ ಸಂಖ್ಯೆ:ಡಿಟಿಇ/62/ಇ.ಎಸ್.ಟಿ(6)/2016 ದಿ:06.10.2020.

*******

ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಿಜ್ವಾನ್ ಅರ್ಷದ್(ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಗೆ ಮಾಹಿತಿಯನ್ನು ಕಳುಹಿಸುವಂತೆ ತಿಳಿಸಲಾಗಿದೆ.

ಸದರಿ ಪ್ರಶ್ನೆಯಲ್ಲಿ "2008ನೇ ಸಾಲಿನಿಂದ 2018ನೇ ಸಾಲಿನವರೆಗೆ ವರ್ಷವಾರು ಗುತ್ತಿಗೆ ಅಥವಾ ಹೊರಗುತ್ತಿಗೆ ಆಧಾರದ ಮೇಲೆ ಎಷ್ಟು ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ ಮತ್ತು ಯಾವ ಯಾವ ಏಜೆನ್ಸಿಗಳ ಮೂಲಕ ಮಾಡಿಕೊಳ್ಳಲಾಗಿರುತ್ತದೆ" ಎಂಬ ಮಾಹಿತಿಯನ್ನು ಕೋರಿದ್ದು, ಈ ಬಗ್ಗೆ ತಾಂತ್ರಿಕ ಶಿಕ್ಷಣ ಇಲಾಖೆಯ ಇಲಾಖೆಯ ಅಧೀನದಲ್ಲಿ ಬರುವ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಮತ್ತು ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಿಗೆ ಸಂಬಂಧಿಸಿದಂತೆ ಕ್ರೋಢೀಕೃತ ಮಾಹಿತಿಯನ್ನು ಸಲ್ಲಿಸಬೇಕಾಗಿರುತ್ತದೆ.ಈ ಸಂಬಂಧ ತಮ್ಮ ತಮ್ಮ ಸಂಸ್ಥೆಗಳ ಮಾಹಿತಿಯನ್ನು ಉಲ್ಲೇಖ(2)ರ ಗೂಗಲ್-ಫಾರ್ಮ್ ಲಿಂಕ್ ಮೂಲಕ ಮಾಹಿತಿ ಸಲ್ಲಿಸಲು ಸೂಚಿಸಲಾಗಿತ್ತು. ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ 2008ನೇ ಸಾಲಿನಿಂದ 2018 ನೇ ಸಾಲಿನವರೆಗೆ ವರ್ಷವಾರು ಗುತ್ತಿಗೆ ಅಥವಾ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವ ಬಗ್ಗೆ ಈ ಕಛೇರಿಯಿಂದ ಆದೇಶವಾಗಿರುವ ಪ್ರತಿಗಳನ್ನು ದೃಢೀಕರಿಸಿ ಹಾಗೂ ನಮೂನೆ-1ಯ ಭರ್ತಿ ಮಾಡಿ ಈ ಕಛೇರಿಗೆ ದಿ:02.12.2020ರೊಳಗೆ ಜರೂರು ಸಲ್ಲಿಸಲು ಸೂಚಿಸಲಾಗಿದೆ.

**ಆಡಳಿತಾಧಿಕಾರಿ**
**ತಾಂತ್ರಿಕ ಶಿಕ್ಷಣ ಇಲಾಖೆ**

**ಇವರಿಗೆ,**
1. ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನಕ್ಕೆ ಎಲ್ಲಾ ಪ್ರಾಂಶುಪಾಲರು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು/ಸರ್ಕಾರಿ ಪಾಲಿಟೆಕ್ನಿಕ್-ಗಳು ಮತ್ತು ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳು.
2. ಇ-ಆಡಳಿತ ವಿಭಾಗ(ಅಂತರ್ಜಾಲದಲ್ಲಿ ಪ್ರಚುರ ಪಡಿಸಲು ಕೋರಿದೆ).
3. ಕಛೇರಿ ಪ್ರತಿ.

## ನಮೂನೆ-1

**2008ನೇ ಸಾಲಿನಿಂದ ಈವರೆಗೆ ವರ್ಷವಾರು ಗುತ್ತಿಗೆ ಅಥವಾ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸಿಬ್ಬಂದಿಗಳನ್ನು ಹಾಗೂ ಅರೆಕಾಲಿಕ ಅಕುಶಲದಾಳುಗಳನ್ನು ನೇಮಕ ಮಾಡಲಾಗಿರುವ ವಿವರ**

**ಸಂಸ್ಥೆಯ ಸಂಕೇತ(ಕೊಡ್) ಸಂಖ್ಯೆ:____**

| ವರ್ಷ | ಸಂಸ್ಥೆಯ ಹೆಸರು | ಭದ್ರತಾ ಸಿಬ್ಬಂದಿ ಸಂಖ್ಯೆ(ಅರೆಕಾಲಿಕ ಅಕುಶಲದಾಳುಗಳು ಹೊರತುಪಡಿಸಿ) | ಏಜೆನ್ಸಿಯ ಹೆಸರು | ಡಿಟಿಇ ಆದೇಶದ ಸಂಖ್ಯೆ |
|---|---|---|---|---|
| 2008 | | | | |
| 2009 | | | | |
| 2010 | | | | |
| 2011 | | | | |
| 2012 | | | | |
| 2013 | | | | |
| 2014 | | | | |
| 2015 | | | | |
| 2016 | | | | |
| 2017 | | | | |
| 2018 | | | | |

<u>ಸೂಚನೆ</u>:ಆದೇಶದ ಪ್ರತಿಗಳನ್ನು ದೃಢೀಕರಿಸಿ ಲಗತ್ತಿಸತಕ್ಕದ್ದು

ಪ್ರಾಂಶುಪಾಲರು
ತಾಂತ್ರಿಕ ಶಿಕ್ಷಣ ಇಲಾಖೆ